# ಆಧುನಿಕ ವಚನಕಾರರ ವಚನಗಳಲ್ಲಿ ಸಾಮಾಜಿಕ ವಿಚಾರಗಳು

**ಕುಮಾರ ಹೆಚ್.ಎಂ.[1] & ರಾಜಶೇಖರ ಜಮದಂಡಿ[2]**

[1]ಸಹಾಯಕ ಪ್ರಾಧ್ಯಾಪಕರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಅರಸೀಕೆರೆ, ಹಾಸನ ವಿಶ್ವವಿದ್ಯಾನಿಲಯ.

[2]ಪ್ರಾಧ್ಯಾಪಕರು ಮತ್ತು ಮಾರ್ಗದರ್ಶಕರು, ಸಮಾಜ ವಿಜ್ಞಾನ ಹಾಗೂ ಮಾನವಿಕ ವಿಭಾಗ, ಶ್ರೀನಿವಾಸ ವಿಶ್ವವಿದ್ಯಾನಿಲಯ, ಮಂಗಳೂರು.

DOI: https://doi.org/10.5281/zenodo.18787501

## ABSTRACT:

ಆಧುನಿಕ ಯುಗದಲ್ಲೂ ಶರಣರ ಜಾಡನ್ನು ಹಿಡಿದು 20ನೇ ಶತಮಾನದಲ್ಲಿ ಆಧುನಿಕ ಕನ್ನಡ ವಿದ್ವಾಂಸರು ಪ್ರಸ್ತುತ ಸಮಾಜವನ್ನು ತಿದ್ದುವ ಪ್ರಯತ್ನದಲ್ಲಿ ತಮ್ಮದೇ ಆದ ವಿಚಾರಗಳನ್ನು ವಚನ ರೂಪದಲ್ಲಿ ಕಟ್ಟಿಕೊಟ್ಟಿದ್ದಾರೆ. ಆಧುನಿಕ ವಚನಗಳು ಯಾರ ಹಂಗಿಲ್ಲದೆ, ನೇರವಾಗಿ, ಕಿರಿದಾಗಿ ಹೇಳುವ ಸಾಮರ್ಥ್ಯ ಪಡೆದಿವೆ. ಅಂದಿನ ನಡುಗನ್ನಡ ವಚನಕಾರರಂತೆ ಇಂದಿನ ಹೊಸಗನ್ನಡ ವಚನಕಾರರು ತಮ್ಮ ವಚನದ ಕೊನೆಗೆ ಅಂಕಿತನಾಮವಾಗಿ ತಮ್ಮದೇ ನಾಮಧೇಯ, ಇಷ್ಟದೈವ ಅಥವಾ ಇನ್ಯಾವುದೋ ಕುರುಹನ್ನು ಬಳಸಿಕೊಂಡಿರುವುದುಂಟು. ಇಬ್ಬರ ಆಶಯಗಳು ಜನಮುಖಿ ಮತ್ತು ಜೀವನಮುಖಿಯಾಗಿವೆ. ಸಮಾಜ ಪರಿವರ್ತನೆಗೆ ಬೇಕಾಗುವ ಗುಣಗಳಲ್ಲಿ ಸಮೃದ್ಧವಾಗಿ ಕಂಡುಬರುವ ದೈವೀಶ್ರದ್ಧೆ, ಶ್ರಮದ ದುಡಿಮೆ, ಗುಣದೋಷಗಳ ವಿಮರ್ಶೆ, ಆತ್ಮನಿರೀಕ್ಷೆ, ಜೀವನ ಪ್ರೀತಿ, ಉಪಕಾರ ಸ್ಮರಣೆ, ನಿಸರ್ಗ ನಂಬಿಕೆ, ಪ್ರಾಮಾಣಿಕತೆ, ವಿಚಾರಶೀಲತೆ, ಮನೋವೈಶಾಲ್ಯತೆ, ಸಭ್ಯತೆ ಇತ್ಯಾದಿ ಅಂಶಗಳನ್ನು ವಚನಗಳಲ್ಲಿ ಕಾಣುತ್ತೇವೆ.

## KEYWORDS:

ಸಮಾಜ ಪರಿವರ್ತನೆ, ಆಧುನಿಕ ವಚನಗಳು, ಆತ್ಮಸಾಕ್ಷಿ, ಶಿವಶರಣರು, ಅಂಕಿತನಾಮ, ಘಾತುಕ.

**ಪೀಠಿಕೆ**

ಹನ್ನೆರಡನೆಯ ಶತಮಾನವು ಕರ್ನಾಟಕದ ಇತಿಹಾಸ ಮತ್ತು ಕನ್ನಡ ಸಾಹಿತ್ಯದ ಹಿನ್ನೆಲೆಯಲ್ಲಿ ಬಹಳ ಮಹತ್ವವನ್ನು ಪಡೆದ ಕಾಲ. ಕಲ್ಯಾಣದಲ್ಲಿ ನಡೆದಂತಹ ರಾಜಕೀಯ ಚಳವಳಿಯ ಜೊತೆಯಲ್ಲಿ ಸಾಹಿತ್ಯಿಕ ಚಳವಳಿಯೂ ಒಳಗೊಂಡಿತ್ತು. ವಚನಗಳ ಸೃಷ್ಟಿಯು ಒಂದು ನೂತನವಾದ ಪ್ರಯೋಗವಾಗಿತ್ತು. ಸಮಾಜದಲ್ಲಿನ ಲಿಂಗ, ಜಾತಿ, ವರ್ಗ, ವರ್ಣ, ಧರ್ಮ ಇತ್ಯಾದಿಗಳ ಭೇದ-ಭಾವವಿಲ್ಲದೆ ಎಲ್ಲರೂ ವಚನಗಳನ್ನು ಸೃಷ್ಟಿಸಿದರು. ಇದು ಅನುಭಾವಿಕ ಸಾಹಿತ್ಯವಾಗಿದೆ. ಅನುಭವ ಮಂಟಪದಲ್ಲಿ ನುಡಿದಂತೆ ನಡೆದು, ನಡೆದಂತೆ ನುಡಿದ ಆತ್ಮಸಾಕ್ಷಿಯ ಮಾತು ವಚನಗಳ ರೂಪದಲ್ಲಿ ಬಂದಿತು. ಹಾಡಿದರೆ ಹಾಡಾಗುವ, ಓದಿದರೆ ಗದ್ಯವಾಗುವ ಇದು ವಚನಕಾರರ ಅನುಭಾವದ ಸಾಹಿತ್ಯವಾಗಿತ್ತು. ವಚನಕಾರರು ಸಮಾಜದಲ್ಲಿನ ಮೌಢ್ಯತೆ, ಕಂದಾಚಾರ, ಲಿಂಗ ತಾರತಮ್ಯ, ವರ್ಗ ತಾರತಮ್ಯ, ವರ್ಣ ವ್ಯವಸ್ಥೆ, ಅಸ್ಪೃಶ್ಯತೆ, ಜಾತಿ ವ್ಯವಸ್ಥೆ ಮುಂತಾದವುಗಳನ್ನು ಖಂಡಿಸಿ ವಚನಗಳನ್ನು ಜನರ ಆಡುನುಡಿಯಲ್ಲಿ ಜನತೆಗೆ ಅರ್ಥವಾಗುವಂತೆ ಸರಳ ಕನ್ನಡದಲ್ಲಿ ರಚಿಸಿದರು.

ಆಧುನಿಕ ಕನ್ನಡ ಸಾಹಿತ್ಯದಲ್ಲೂ ಬಹಳಷ್ಟು ಸಾಹಿತಿಗಳು ಶರಣರ ವಚನಗಳ ರೀತಿಯಲ್ಲಿ ವಚನಗಳನ್ನು ರಚಿಸಿದ್ದಾರೆ. ಇವರ ಮೇಲೆ ಹನ್ನೆರಡನೆಯ ಶತಮಾನದ ಶರಣರ ವಚನಗಳ ಪ್ರಭಾವ ಮತ್ತು ಪ್ರೇರಣೆಯಾಗಿದೆ. ಅಂಕಿತನಾಮ, ಮುಕ್ತತೆ, ಸ್ವಚ್ಛಂದ ಲಯಗಳಲ್ಲಿ ಕಾಣಬಹುದು. ಆಧುನಿಕ ವಚನಕಾರರಲ್ಲಿ ಅನೇಕರು ಶಿವಶರಣರಂತೆ ಜೀವನ ನಡೆಸಿದ್ದಾರೆ. ಕೆಲವರು ಮಠಾಧಿಪತಿಗಳು, ಧರ್ಮಾಧಿಕಾರಿಗಳು, ಸಮಾಜ ಚಿಂತಕರು, ಬಗೆಬಗೆಯ ವೃತ್ತಿಯಲ್ಲಿನ ಜನರು, ಗೃಹಿಣಿಯರು ವಚನಗಳನ್ನು ರಚಿಸಿದ್ದಾರೆ. ಇವರಲ್ಲಿ ಜೀರಗೆಕಟ್ಟೆ ಬಸವಪ್ಪ, ಹರ್ಡೇಕರ್ ಮಂಜಪ್ಪ, ಎಸ್.ವಿ. ರಂಗಣ್ಣ, ಪರಮೇಶ್ವರಭಟ್ಟ, ಸಿದ್ದಯ್ಯ ಪುರಾಣಿಕ, ಕಮಲಾ ಹಂಪನಾ, ಸಿಪಿಕೆ, ಸಿ.ಪಿ. ಸಿದ್ದಾಶ್ರಮ, ಡಾ. ಆರ್.ಬಿ. ಚಿಲುಮಿ, ವಿಶ್ವನಾಥ ಮುಕ್ತಾ, ವಿಜಯರೂಪ ತಂಬಾಕದ, ಸ.ರಾ. ಸೂಳಕೂಡೆ, ಡಾ. ಪಲ್ಲವಿ ಪಾಟೀಲ, ಸುಭಾಷ ಹರ್ವಾಪೂರ ಮುಂತಾದವರು. ಶಿವಶರಣರಂತೆ ಸಮಾಜದಲ್ಲಿನ ವರ್ಗ ತಾರತಮ್ಯ, ಲಿಂಗ ತಾರತಮ್ಯ, ಕಂದಾಚಾರಗಳನ್ನು ಆಧುನಿಕ ವಚನಕಾರರು ತಮ್ಮ ವಚನಗಳಲ್ಲಿ ಖಂಡಿಸಿದ್ದಾರೆ. ಆ ನಿಟ್ಟಿನಲ್ಲಿ ಕೆಲವು ವಚನಗಳನ್ನು ಇಲ್ಲಿ ವಿಶ್ಲೇಷಿಸಲಾಗಿದೆ.

**ಜಾತಿ ವಿಜಾತಿ ಎಂದೆಣಿಸದಿರಯ್ಯ**
**ದೇಶ- ವಿದೇಶ ಎಂದೆಣಿಸದಿರಯ್ಯ**
**ಸ್ವಭಾಷೆ ಪರಭಾಷೆ ಎಂದೆಣಿಸದಿರಯ್ಯ**
**ವಸುಧೈವ ಕುಟುಂಬಕಂ ಎಂಬುದು ಮರೆಯದಿರಯ್ಯ**
**ಇದೇ ನಮ್ಮ ಸುಬುದ್ಧಿ**
**ಇದೇ ನಮ್ಮ ಸುಬುದ್ಧಿ, ಎಂದನಾ**
**ಸುದರ್ಶನಪ್ರಿಯ ಕರುಣಾಳು ದೇವಾ**

**(ಸುದರ್ಶನಪ್ರಿಯನ ವಚನಗಳು, 2014, ಪುಟ 18)**

ಭಾರತೀಯ ಸಮಾಜವನ್ನು ಅನಾದಿಕಾಲದಿಂದಲೂ ಕಾಡಿರುವಂತಹ ಜಾತಿ ವ್ಯವಸ್ಥೆಯು ಇಂದಿಗೂ ಜೀವಂತವಿರುವುದು ದುರಂತವೇ ಸರಿ. ಹುಟ್ಟಿನಿಂದ ಎಲ್ಲರೂ ಸಮಾನರಾದರೂ ಜಾತಿಯ ಕಾರಣವಾಗಿ ಸಮಾಜದಲ್ಲಿ ಮೇಲು ಕೀಳೆಂಬ ಭಾವವಿರುವುದನ್ನು ಈ ವಚನದ ಮೂಲಕ ವಚನಕಾರರು ನಿರಾಕರಿಸುತ್ತಾರೆ. ಇಡೀ ವಿಶ್ವವೇ ಒಂದು. ಇದಕ್ಕೆ ದೇಶ ಭಾಷೆಗಳ ಗಡಿ ಬೇಡ ಎಂದು ವಚನಕಾರರು ಹೇಳುತ್ತಾರೆ. ವಿಶ್ವಮಾನವತ್ವವನ್ನು ಸಾರುವುದೇ, ಎಲ್ಲ ಬಗೆಯ ಸಂಕುಚಿತ ಭಾವನೆಗಳನ್ನು ದಾಟುವುದೇ ನಮ್ಮ ಸುಬುದ್ಧಿ ಎಂದು ಸುಭಾಷ ಹರ್ವಾಪೂರರವರು ತಮ್ಮ ವಚನದಲ್ಲಿ ಹೇಳುತ್ತಾರೆ. ಇವತ್ತಿಗೂ ಮನುಜನು ಜಾತಿ, ಭಾಷೆ ಮತ್ತು ದೇಶಗಳು ಮಾನವ ಸಂಕುಲವನ್ನು ಒಗ್ಗೂಡಲು ಇರುವ ತಡೆಗೋಡೆಗಳಾಗಿರುವುದನ್ನು ನಾವು ನೋಡಬಹುದು.

**ಯಾರೋ ಹೊಲಿದ ಬಟ್ಟೆ ಹಾಕ್ತೀವಿ ಜಾತಿ ನೋಡ್ತೀವಾ?**
**ಯಾರೋ ಬೆಳೆದ ಅಕ್ಕಿ (ಧಾನ್ಯ) ತಿಂತಿವಿ ಜಾತಿ ನೋಡ್ತೀವಾ?**
**ಯಾರ್ಯಾರಿಗೋ ರಕ್ತದಾನ ಬೇಡ್ತಿವಿ ಜಾತಿ ನೋಡ್ತೀವಾ?**
**ವಿದ್ಯೆಗಾಗಿ ಗುರು ಬೇಕಂತಿವಿ ಜಾತಿ ನೋಡ್ತೀವಾ?**
**ಜೀವ ಉಳಿಸಲು ವೈದ್ಯರನ್ನ ನೋಡ್ತೀವಿ ಜಾತಿ ನೋಡ್ತೀವಾ?**
**ಜಾತಿ ನೋಡಿ ಬದುಕಿದ್ರೆ ಉಸಿರಿಲ್ಲ**
**ಜಾತಿ ನೋಡಿ ಬದುಕಿದ್ರೆ ಮಾನವ ಕುಲದ ಅಂತ್ಯ ಕಾಣಾ**
**ದಿಗ್ಗಿ ಮಲ್ಲಿಕಾರ್ಜುನ ದೇವಾ //**

**(ವಚನಧಾರೆ, 2018, ಪುಟ 14)**

ವಿಜಯರೂಪ ತಂಬಾಕದ ಅವರು ತಮ್ಮ 'ವಚನಧಾರೆ' ಎನ್ನುವ ಕೃತಿಯಲ್ಲಿ ಸಮಾಜದಲ್ಲಿನ ಜನರು ತಮ್ಮ ಅಗತ್ಯಗಳನ್ನು ಪೂರೈಸಿಕೊಳ್ಳುವ ಸಂದರ್ಭದಲ್ಲಿ ನಾವು ಜಾತಿಯನ್ನು ಪರಿಗಣಿಸದವರು ಎಂದು ಹೇಳಿದ್ದಾರೆ. ನಮ್ಮ ಮೂಲಭೂತ ಅವಶ್ಯಕತೆಗಳಲ್ಲಿ ಉಡುಪು ಕೂಡ ಒಂದು. ದೇಹಕ್ಕೆ ಮಳೆ, ಗಾಳಿ, ಚಳಿ, ಬಿಸಿಲಿನಿಂದ ರಕ್ಷಣೆ ಪಡೆಯಲು ಉಡುಪನ್ನು ಧರಿಸುತ್ತೇವೆ. ಈ ಉಡುಪನ್ನು ಯಾರು ಹೊಲಿಯುತ್ತಾರೆ ಎಂದು ನಾವು ನೋಡುವುದಿಲ್ಲ. ಹಸಿವಾದಾಗ ತಿನ್ನುವ ಆಹಾರವನ್ನು ಯಾರು ಬೆಳೆಯುತ್ತಾರೆ ಎಂದು ನೋಡುವುದಿಲ್ಲ. ಆಗ ಜಾತಿ ನೋಡಿದರೆ ಹಸಿವಿನಿಂದ ಸಾಯಬೇಕಾಗುತ್ತದೆ. ಅಪಘಾತವಾದಾಗ ಇಲ್ಲವೇ ದೇಹಕ್ಕೆ ಚಿಕಿತ್ಸೆ ನೀಡುವ ಸಂದರ್ಭ ಬಂದಾಗ, ರಕ್ತದ ಅವಶ್ಯಕತೆ ಬಂದಾಗ ನಮಗೆ ಸರಿ ಹೊಂದುವ ರಕ್ತವನ್ನು ಪಡೆದು ಜೀವ ಉಳಿಸಿಕೊಳ್ಳುತ್ತೇವೆಯೋ ಹೊರತು ನಮ್ಮದೇ ಜಾತಿಯವನ ರಕ್ತ ಬೇಕೆಂದು ಹಟಮಾಡುವುದಿಲ್ಲ. ವಿದ್ಯೆ ಕಲಿಸುವ ಗುರುಗಳು, ಜೀವ ಉಳಿಸುವ ವೈದ್ಯರ ಜಾತಿಗಳನ್ನು ನಾವು ನೋಡುವುದಿಲ್ಲವೋ, ಅದೇ ರೀತಿಯಲ್ಲಿ ಎಲ್ಲ ಸಂದರ್ಭಗಳಲ್ಲೂ ನಾವು ಜಾತಿಯನ್ನು ಗಮನಿಸಬಾರದೆಂದು ವಚನಕಾರರ ಆಶಯವಾಗಿದೆ. ಜಾತಿ ಜಾತಿಯೆಂದು ಸಾಯುವ ಜನರಿಗೆ, ಜಾತಿಯನ್ನು ನೋಡಿ ಬದುಕಲು ಹೋದರೆ ಮಾನವ ಕುಲವೇ ನಾಶವಾಗುವುದು ಖಚಿತವೆಂದು ಹೇಳುತ್ತಾರೆ.

**ಮನವಿಲ್ಲದೆ ಮಂತ್ರಾಲಯಕ್ಕೆ ಹೋದಡೇನು ಫಲ?**

**ಧರ್ಮವಿಲ್ಲದೆ ಧರ್ಮಸ್ಥಳಕ್ಕೆ ಹೋದಡೇನು ಫಲ?**
**ತಿರುಕನಿಗೆ ಭಿಕ್ಷೆ ನೀಡದೆ ತಿರುಪತಿಗೆ ಹೋದಡೇನು ಫಲ?**
**ಶಾಂತಿಯಿಲ್ಲದೆ ಶಬರಿಮಲೆಗೆ ಹೋದಡೇನು ಫಲ?**
**ಇರುವಲ್ಲಿಯೇ ಇದ್ದು ಮಾನವೀಯ ಮೌಲ್ಯಗಳ ಪಾಲಿಸಿದರೆ ಸಾಕು ನೋಡಾ**
**ಸುದರ್ಶನ ಪ್ರಿಯ ಕರುಣಾಳು ದೇವಾ**
**(ಸುದರ್ಶನಪ್ರಿಯನ ವಚನಗಳು, 2014, ಪುಟ 19)**

ತೋರಿಕೆಯ ಭಕ್ತಿಗಿಂತ ಮನುಷ್ಯನಿಗೆ ಅಂತರಂಗದಲ್ಲಿ ಭಕ್ತಿ ಇರಬೇಕು. ಜೊತೆಯಲ್ಲಿ ನರರಲ್ಲಿಯೇ ಹರನನ್ನು ಕಾಣಬೇಕು. ಮನುಜನಲ್ಲಿ ದಯೆ, ಕರುಣೆ ಇರಬೇಕು. ಯಾವುದೇ ದೇವಾಲಯಕ್ಕೆ ಹೋಗಬೇಕೆಂದರೂ ಆತನಲ್ಲಿ ಒಳ್ಳೆಯ ಮನಸ್ಸಿರಬೇಕು. ಕೇವಲ ತೋರಿಕೆಗಾಗಿ ದೇವಾಲಯಗಳಿಗೆ ಹೋಗಬಾರದು. ಜೀವನದಲ್ಲಿ ಧರ್ಮದ ಅನುಪಾಲನೆಯಿದ್ದರೆ ಧರ್ಮಸ್ಥಳಕ್ಕೆ ಹೋದಾಗ ಸಾರ್ಥಕತೆ ಇರುತ್ತದೆ. ಅಧರ್ಮದಿಂದ ಬದುಕಿ ಯಾವುದೇ ಧಾರ್ಮಿಕ ಸ್ಥಳಕ್ಕೆ ಹೋದರೂ ಅದರಿಂದ ಯಾವುದೇ ಫಲ ಸಿಗುವುದಿಲ್ಲ. ಶಬರಿಮಲೆಗೆ ಹೋಗಬೇಕೆಂದರೆ ಮನಸ್ಸಿನಲ್ಲಿ ಶಾಂತಿ ಸಮಾಧಾನದ ಭಾವಗಳು ನೆಲೆಸಿರಬೇಕು. ಆಗ ಭಕ್ತನು ದೇವರನ್ನು ಕಾಣಬಹುದು. ಅದರ ಹೊರತಾಗಿ ಅಶಾಂತಿಯ ಮನಸ್ಸಿನಿಂದ ದೇವಾಲಯಕ್ಕೆ ಹೋದರೆ, ಅದೊಂದು ನಿಷ್ಫಲವಾದ ಕೆಲಸವಾಗುತ್ತದೆ. ದೇವರನ್ನು ಕಾಣಲು ಸಮಾಧಾನ ಅಗತ್ಯವಿದೆ. ಮನುಜನು ದೇವಾಲಯಗಳಲ್ಲಿ ದೇವರನ್ನು ಹುಡುಕದೆ ತಾನಿರುವಲ್ಲಿಯೇ ದೇವರನ್ನು ಕಾಣಲು ಮಾನವೀಯ ಮೌಲ್ಯಗಳನ್ನು ಹೊಂದಿದ್ದರೆ ಸಾಕು ಎಂದು ವಚನಕಾರರು ಹೇಳುತ್ತಾರೆ. ಜನರ ಸೇವೆಯಲ್ಲಿಯೇ ಜನಾರ್ದನನನ್ನು ಕಾಣಬೇಕು.

**ಹೊರಗೊಂದು ಹೇಳುವರಯ್ಯ**
**ಒಳಗೊಂದು ಮಾಡುವರಯ್ಯ**
**ನಮ್ಮವರು-ನಿಮ್ಮವರು ಎಂಬ ಕಿಚ್ಚು ಹಚ್ಚಿ**
**ತಮ್ಮ ಬೇಳೆ ಬೇಯಿಸಿಕೊಳ್ಳುವ ಘಾತುಕರಿಗೆ ಅದೆಂತು ಒಲಿಯುವನಯ್ಯ**
**ಸುದರ್ಶನ ಪ್ರಿಯ ಕರುಣಾಳು ದೇವಾ**
**(ಸುದರ್ಶನಪ್ರಿಯನ ವಚನಗಳು, 2014, ಪುಟ 24)**

ಸುಭಾಷ ಹರ್ವಾಪೂರರವರು ಆಧುನಿಕ ಕಾಲದ ಮನುಜನ ನಡೆ-ನುಡಿಯಲ್ಲಿನ ಭಿನ್ನತೆಯನ್ನು ಸರಳವಾಗಿ ಹೇಳಿದ್ದಾರೆ. ಮನುಷ್ಯ ವೈಜ್ಞಾನಿಕವಾಗಿ ಎಷ್ಟೇ ಮುಂದುವರಿದರೂ ನಾವೆಲ್ಲರೂ ಒಂದೇ ಎಂಬ ಮನೋಭಾವನೆಯು ಇನ್ನೂ ಪೂರ್ಣವಾಗಿ ನೆಲೆಗೊಂಡಿಲ್ಲ. ಸಮಾಜದಲ್ಲಿ ವರ್ಣ ವರ್ಗಗಳ ತಾರತಮ್ಯವೂ ಕಡಿಮೆಯಾಗಿಲ್ಲ. ಇವುಗಳನ್ನು ಬಳಸಿಕೊಂಡು ಸಮಾಜ ಘಾತುಕರು ಕಿಚ್ಚು ಹಚ್ಚಿ ತಮ್ಮ ಬೇಳೆ ಬೇಯಿಸಿಕೊಂಡು ಸಮಾಜದಲ್ಲಿ ಅಶಾಂತಿಯನ್ನು ಉಂಟುಮಾಡುತ್ತಾರೆ. ತಮ್ಮ ಕಾರ್ಯಸಾಧನೆ ಮಾಡಿಕೊಂಡು ತಾವು ಆರಾಮವಾಗಿ ಬದುಕುತ್ತಾರೆ. ಸಾಮಾನ್ಯ ಜನರು ಜಾತಿ ಧರ್ಮಗಳ ಹೆಸರಿನಲ್ಲಿ ಬಡಿದಾಡಿಕೊಂಡು ಒಬ್ಬರನ್ನು ಕಂಡಾಗ ಮತ್ತೊಬ್ಬರು ದ್ವೇಷಿಸುತ್ತಾ ಬದುಕುತ್ತಾರೆ ಎಂಬುದನ್ನು ತಮ್ಮ ವಚನದಲ್ಲಿ ಹೇಳಿದ್ದಾರೆ.

ಮೇಲಿನ ವಚನದ ಚಿತ್ರಣವು ಸದ್ಯದ ನಮ್ಮ ಸಮಾಜದಲ್ಲಿರುವುದನ್ನು ತೋರಿಸುತ್ತದೆ. ಒಡೆದು ಆಳುವವರು ಆರಾಮವಾಗಿರುವುದು ಒಂದು ದೊಡ್ಡ ದುರಂತವೇ ಸರಿ. ಇಂತಹವರಿಗೆ ದೇವರು ಹೇಗೆ ಒಲಿಯುತ್ತಾನೆಂದು ವಚನಕಾರರು ಪ್ರಶ್ನಿಸುತ್ತಾರೆ.

**ಗಂಡು ಹುಟ್ಟಿದರೆ ಸಂತಸ ಪಡುವ**
**ಹೆಣ್ಣು ಹುಟ್ಟಿದರೆ ಸಂಕಟ ಪಡುವ**
**ಹುಟ್ಟಿನಿಂದಲೇ ಮೇಲು ಕೀಳೆಂಬ ಭಾವನೆಯಲಿ ಬದುಕುವ**
**ತಂದೆ-ತಾಯಿಂದಿರು ಪಶು ಪಕ್ಷಿಗಳಿಗಿಂತ ಕೀಳೆಂದ**
**ಬಸವನೀಲಾಂಬಿಕಾತನಯ**

**(ವಚನೋಲ್ಲಾಸ, 2012, ಪುಟ 12)**

ಅಪ್ಪಾಸಾಹೇಬ ಅಲಿಬಾದಿಯವರು ತಮ್ಮ ಆಧುನಿಕ ವಚನಗಳನ್ನು 'ವಚನೋಲ್ಲಾಸ' ಎಂಬ ಕೃತಿಯಲ್ಲಿ ಸಂಗ್ರಹ ಮಾಡಿದ್ದಾರೆ. ಭಾರತೀಯ ಸಮಾಜದಲ್ಲಿ ಶತಶತಮಾನಗಳಿಂದಲೂ ಮಹಿಳೆ ಶೋಷಣೆಗೆ ಒಳಗಾಗಿರುವುದನ್ನು ನೋಡಿದ್ದೇವೆ. ಇಂದಿಗೂ ಆ ಭೂತ ಸಮಾಜದಿಂದ ದೂರವಾಗಿಲ್ಲ. ಲಿಂಗ ಸಮಾನತೆಗಾಗಿ ಹೋರಾಟಗಳು ನಡೆಯುತ್ತಿವೆ. 21ನೇ ಶತಮಾನವು ವೈಜ್ಞಾನಿಕ ಯುಗವಾಗಿದ್ದರೂ, ಮಹಿಳೆ ಪುರುಷನಷ್ಟೇ ಸರಿಸಮಾನಳು ಎನ್ನುವ ಮನೋಭಾವ ಎಲ್ಲರಲ್ಲೂ ಮೂಡಿಬಂದಿಲ್ಲ. ಇಂದಿಗೂ ಭಾರತೀಯ ಸಮಾಜದಲ್ಲಿ ಮಹಿಳೆಯ ಮೇಲೆ ದೈಹಿಕ, ಮಾನಸಿಕ, ಲೈಂಗಿಕ ಶೋಷಣೆಗಳು ನಡೆಯುತ್ತಿರುವುದನ್ನು ಕಾಣಬಹುದು. ನಮ್ಮ ಸುತ್ತಮುತ್ತಲಿನ ಹಲವಾರು ಪಟ್ಟಣಗಳ ಆಸ್ಪತ್ರೆಗಳು, ವೈದ್ಯಕೀಯ ಸಿಬ್ಬಂದಿಗಳು ಭ್ರೂಣಪತ್ತೆಯ ಕಾರ್ಯಮಾಡುತ್ತಿದ್ದಾಗ ಸಿಕ್ಕಿಬಿದ್ದ ಬಹಳಷ್ಟು ಘಟನೆಗಳು ನಾಗರಿಕ ಸಮಾಜವು ತಲೆತಗ್ಗಿಸುವಂತಾಗಿದೆ. ಕುಟುಂಬದಲ್ಲಿರುವ ತಂದೆ-ತಾಯಿಗಳಲ್ಲಿ ಎಲ್ಲ ಮಕ್ಕಳನ್ನು ಸಮಾನವಾಗಿ ನೋಡುವ ಮೂಲಕ ಲಿಂಗ ತಾರತಮ್ಯವನ್ನು ಹೋಗಲಾಡಿಸುವ ಪ್ರಾಥಮಿಕ ಪ್ರಯತ್ನ ಪ್ರಾರಂಭವಾದರೆ, ಸಮಾಜದಲ್ಲಿ ಲಿಂಗ ಸಮಾನತೆ ತರಲು ಸಾಧ್ಯವಾಗುತ್ತದೆ. ಆದರೆ ಕುಟುಂಬದಲ್ಲಿನ ಸದಸ್ಯರು ಹೆಣ್ಣು ಮಗು ಹುಟ್ಟಿದಾಗ ಸಂಕಟಪಟ್ಟು ಗಂಡು ಮಗುವಾದರೆ ಸಂತಸಪಟ್ಟು ಊರಿಗೆಲ್ಲಾ ಸಿಹಿ ಹಂಚುತ್ತಾರೆ. ತಂದೆ-ತಾಯಿಗಳೇ ಮಕ್ಕಳಲ್ಲಿ ಈ ಭಾವನೆ ಮೂಡಿಸಿದರೆ ಅವರು ಪಶು ಪಕ್ಷಿಗಳಿಗಿಂತ ಕೀಳೆಂದು ವಚನಕಾರರು ಹೇಳುತ್ತಾರೆ.

**ಉದರದೊಳಗಿಂದ ಮಡಿಲಿಗೆ ಬರುವ ಮುನ್ನವೆ**
**ಹೆಣ್ಣೆಂದು ಹತ್ಯೆಗೈದವರಿಗೆ,**
**ಸಪ್ತಪದಿ ತುಳಿದ ಬೆನ್ನಲ್ಲೆ ವರದಕ್ಷಿಣೆಗಾಗಿ**
**ಹೆಣ್ಣನ್ನ ಬಲಿತೆಗೆದುಕೊಂಡವರಿಗೆ,**
**ಮಕ್ಕಳು ಮುದುಕಿಯರೆನ್ನದೆ ಅತ್ಯಾಚಾರವೆಸಗಿದವರಿಗೆ,**
**ಮಾನವರಾಗಿದ್ದು ಮಾನವೀಯತೆ ಮರೆತು**
**ರಾಕ್ಷಸತ್ವದಿಂದ ಹೊರಬಂದು**
**ಮೂರನೇ ಕಣ್ಬಿಟ್ಟು ಸುಟ್ಟುಭಸ್ಮ ಮಾಡಯ್ಯ ತಂದೆ**
**ದಿಗ್ಗಿ ಮಲ್ಲಿಕಾರ್ಜುನ ದೇವಯ್ಯಾ**

**(ವಚನಧಾರೆ, 2018, ಪುಟ 26)**

ವಿಜಯರೂಪ ತಂಬಾಕದರವರು ಮೇಲಿನ ವಚನದಲ್ಲಿ ಭ್ರೂಣಹತ್ಯೆಯ ಬಗ್ಗೆ ಹೇಳುತ್ತಾರೆ. ಇಂದಿಗೂ ಹೆಣ್ಣನ್ನು ಸಮಾನವಾಗಿ ಕಾಣದಿರುವ ಸಮಾಜದ ನೀತಿಯನ್ನು ಪ್ರಶ್ನೆ ಮಾಡುತ್ತಾರೆ. ಹೆಣ್ಣು ಈ ಭೂಮಿಗೆ ಬರುವ ಮೊದಲೇ ಅದು ಗಂಡೋ ಹೆಣ್ಣೋ ಎಂದು ಗರ್ಭದೊಳಗಿನ ಲಿಂಗ ಪರೀಕ್ಷೆ ಮಾಡಿ, ಅದು ಹೆಣ್ಣಾಗಿದ್ದರೆ ತೆಗೆಸುವ ಕೆಲಸ ಇಂದಿನ ಸಮಾಜದಲ್ಲಿ ನಡೆಯುತ್ತಿರುವುದರ ಬಗ್ಗೆ ಬಹಳಷ್ಟು ಮಾಧ್ಯಮಗಳಲ್ಲಿ ಬರುತ್ತಿರುವುದು ನಮಗೆಲ್ಲಾ ತಿಳಿದಿರುವ ವಿಷಯವಾಗಿದೆ. ಮದುವೆಯಾಗಿ ಮಾವನ ಮನೆಗೆ ಬಂದ ಸ್ವಲ್ಪ ದಿನಗಳಲ್ಲಿ ವರದಕ್ಷಿಣೆಗಾಗಿ ಸೊಸೆಗೆ ಹಿಂಸೆ ನೀಡಿ ಕೊಲೆ ಮಾಡುತ್ತಾರೆ. ತಲೆಗೆ ಅಕ್ಕಿ ಕಾಳು ಹಾಕಿದ ಕೈಗಳೇ ಬಾಯಿಗೆ ಅಕ್ಕಿಕಾಳು ಹಾಕುವುದು ದುರಂತದ ಸಂಗತಿಯೇ ಸರಿ. ಕಾಯುವ ಕೈಗಳೇ ಕೊಲ್ಲುವಾಗ ರಕ್ಷಕರಾರು? ಅಬಾಲ ವೃದ್ಧರಾಗಿ ಕಾಮ ಪಿಶಾಚಿಗಳು ಅವರ ದೇಹದ ಮೇಲೆರುವವರಿಗೆ, ಹೆಣ್ಣಿನ ಮೇಲೆ ಮಾನವೀಯತೆಯನ್ನು ತೋರದ ಎಲ್ಲರಿಗೂ ದಿಗ್ಗಿ ಮಲ್ಲಿಕಾರ್ಜುನ ತಂದೆಯೇ (ಈಶ್ವರ) ನಿನ್ನ ಮೂರನೇ ಕಣ್ಣು ಬಿಟ್ಟು ಅವರನ್ನು ಸುಟ್ಟು ಬಿಡು ತಂದೆ ಎಂದು ಕೇಳುತ್ತಾರೆ. ಮಹಿಳೆಯರ ಮೇಲೆ ನಡೆಯುತ್ತಿರುವ ದೌರ್ಜನ್ಯವು ನಿಲ್ಲಬೇಕಾದರೆ, ಶಿವನ ಮೂರನೇ ಕಣ್ಣು ತೆರೆಯಬೇಕು ಎಂದು ಹೇಳುವ ಮೂಲಕ, ಸರಿಯಾದ ಶಿಕ್ಷೆಯಾದರೆ ಮಾತ್ರ ಅವರು ಮೇಲಿನ ದುಷ್ಕೃತ್ಯಗಳನ್ನು ನಿಲ್ಲಿಸುತ್ತಾರೆ. ಇಲ್ಲದಿದ್ದರೆ ಅದು ಮುಂದುವರಿಯುತ್ತದೆ ಎನ್ನುವ ಸೂಚನೆಯನ್ನು ನೀಡುತ್ತಾರೆ. ಸಣ್ಣ ಪುಟ್ಟ ಶಿಕ್ಷೆ ನೀಡಿದರೆ ಸಾಲದು ಅವರನ್ನು ಈ ನೆಲದ ಮೇಲೆ ಇಲ್ಲವಾಗಿಸುವ ಕೆಲಸವಾಗಬೇಕು ಎಂದು ಹೇಳುತ್ತಾರೆ.

**ಪರಾಮರ್ಶನ ಗ್ರಂಥಗಳು:**

1. ಅಪ್ಪಾಸಾಹೇಬ ಅಲಿಬಾದಿ, (2012), ವಚನೋಲ್ಲಾಸ, ಅಥಣಿ: ವಿನೂತನ ಪ್ರಕಾಶನ.
2. ಚಿದಾನಂದ ಮೂರ್ತಿ ಎಂ., (2000), ವಚನ ಸಾಹಿತ್ಯ, ಬೆಂಗಳೂರು: ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾನಿಲಯ.
3. ಪಲ್ಲವಿ ಪಾಟೀಲ, (2022), ವಚನ ಪಲ್ಲವಿ, ಬಸವಕಲ್ಯಾಣ: ಪಲ್ಲವಿರಾಜ್ ಪ್ರಕಾಶನ.
4. ಸೋಮನಾಥ ಯಾಳವಾರ, (2017), ಆಧುನಿಕ ವಚನಕಾರರು ಹಾಗೂ ಸಾಹಿತ್ಯ ಚಿಂತನೆ, ಕಲಬುರಗಿ: ಶ್ರೀ ಸಿದ್ಧಲಿಂಗೇಶ್ವರ ಪ್ರಕಾಶನ.
5. ವಿಜಯರೂಪ ತಂಬಾಕದ, (2018), ವಚನಧಾರೆ, ಮೈಸೂರು: ಕಣಿವೆ ಪ್ರಕಾಶನ.
6. ಶೇಖರಯ್ಯ ಟಿ.ಹೆಚ್.ಎಂ., (2021), ವಚನಸಿರಿ, ಗೆದ್ದಲಕಟ್ಟೆ: ವಿಶ್ವಾಸ ಕಣಿವೆ ಪ್ರಕಾಶನ.
7. ಸುಭಾಷ ಹರ್ವಾಪೂರ, (2014), ಸುದರ್ಶನಪ್ರಿಯನ ವಚನಗಳು, ಹರ್ವಾಪೂರ: ಸುದರ್ಶನ ಪ್ರಕಾಶನ.